**ಸಾಕ್ಷಿಯನ್ನು ದಿಃ 04.04.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಜಿ ಎಸ್ ಬಿ ವಕೀಲರಿಂದಃ**

1) ನಾನು ವಿದ್ಯಾಭ್ಯಾಸ ಮಾಡಿಲ್ಲ. ಆರೋಪಿ ನನಗೆ 10 ವರ್ಷಗಳಿಂದ ಪರಿಚಯಸ್ಥರು. ಆರೋಪಿ ಕಗ್ಗೆರೆ ಗ್ರಾಮದವರು. ಈ ಪ್ರಕರಣ ಹೊರತುಪಡಿಸಿ ಆರೋಪಿಯೊಂದಿಗೆ ಬೇರೆ ಯಾವುದೇ ವ್ಯವಹಾರ ಮಾಡಿಲ್ಲ. ಆರೋಪಿ ವ್ಯವಸಾಯ ಮಾಡುತ್ತಾರೆ. ನಾನು ವ್ಯವಸಾಯ ಮಾಡುತ್ತೇನೆ. ನಾನು 4 ಎಕರೆ ಜಮೀನನ್ನು ಹೊಂದಿದ್ದೇನೆ. ನನಗೆ ಜಮೀನಿನಿಂದ ಬರುವ ಆದಾಯ ಬಿಟ್ಟರೆ ಬೇರೆ ಯಾವುದೇ ಆದಾಯ ಬರುವುದಿಲ್ಲ. ನಾನು ಬಿ ಪಿ ಎಲ್ ಪಡಿತರ ಚೀಟಿಯನ್ನು ಹೊಂದಿದ್ದೇನೆ.

2) ನಾನು ಫೆಡರಲ್ ಬ್ಯಾಂಕಿನ ಖಾತೆಯನ್ನು ಹೊಂದಿದ್ದೇನೆ. ನಾನು 24.01.2024 ರಂದು ಆರೋಪಿಗೆ ಹಣವನ್ನು ನೀಡಿರುತ್ತೇನೆ. ಆರೋಪಿ ತನ್ನ ಮನೆಯ ಕಡೆ ತೊಂದರೆಯಾಗಿದೆ ಎಂದು ನನ್ನಿಂದ ಹಣ ಪಡೆದಿರುತ್ತಾರೆ. ಜನವರಿ ಮೊದಲನೆ ವಾರದಲ್ಲಿ ಆರೋಪಿ ನನ್ನನ್ನು ಹಣ ನೀಡುವಂತೆ ಕೇಳಿರುತ್ತಾರೆ. ನಾನು ದಿಃ 21.01.2024 ರಂದು ನಮ್ಮ ಮನೆಯಲ್ಲಿ ಹಣ ನೀಡಿರುತ್ತೇನೆ. ಹಣ ನೀಡುವಾಗ ನಮ್ಮ ಮನೆಯವರೆಲ್ಲರು ಇದ್ದರು. ನಾನು ಹಣ ನೀಡುವಾಗ ಯಾವುದೇ ಕಾಗದ ಪತ್ರವನ್ನು ಮಾಡಿಕೊಂಡಿಲ್ಲ. ಆರೋಪಿಗೆ ಇದೇ ದಿನ ಬರಬೇಕೆಂದು ನಾನು ಮೊದಲೇ ಹೇಳಿದ್ದೆ. ಆ ದಿನ ಯಾವುದೇ ಕಾಗದ ಪತ್ರ ಮಾಡಿಕೊಳ್ಳಲು ತೊಂದರೆ ಇರಲಿಲ್ಲ.

3) ನಾನು ಆರೋಪಿಗೆ ಹಣವನ್ನು ನಗದಾಗಿ ನೀಡಿರುತ್ತೇನೆ. ನಾನು 500 ರೂ ಮುಖಬೆಲೆಯ 300 ನೋಟುಗಳನ್ನು ಆರೋಪಿಗೆ ನೀಡಿರುತ್ತೇನೆ. ಮನೆಯಲ್ಲಿ ಹಣ

ಇದ್ದುದ್ದರಿಂದ ನಾನು ಹಣ ನೀಡಿರುತ್ತೇನೆ. ನಾನು ಆದಾಯತೆರಿಗೆ ಪಾವತಿದಾರನಲ್ಲ. ನಾನು ನನ್ನ ಬ್ಯಾಂಕ್ ಸ್ಟೇಟ್ ಮೆಂಟ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು ಹಣವನ್ನು ನೀಡಿದ ದಿನಾಂಕದ ಹಿಂದಿನ 3 ತಿಂಗಳ ಬ್ಯಾಂಕ್ ಸ್ಟೇಟ್ ಮೆಂಟ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ.

4) ಆರೋಪಿ ನನಗೆ ಚೆಕ್ ನ್ನು ನಾನು ಹಣ ನೀಡಿದ ದಿನದಂದೇ ನೀಡಿರುತ್ತಾರೆ. ಆರೋಪಿ ನನಗೆ ಚೆಕ್ ನ ಮೇಲೆ ಸಹಿ ಮಾಡಿ ಚೆಕ್ ನೀಡಿರುತ್ತಾರೆ. ಚೆಕ್ ನಂಬರ್ ಹೇಳಲಾಗುವುದಿಲ್ಲ. ಸದರಿ ಚೆಕ್ ಕರ್ನಾಟಕ ಬ್ಯಾಂಕಿಗೆ ಸೇರಿದ್ದಾಗಿತ್ತು. ಚೆಕ್ ನ ಮೇಲೆ ಹಣವನ್ನು ವಕೀಲರು ಬರೆದಿರುತ್ತಾರೆ. ಖಾತೆಯಲ್ಲಿ ಹಣ ಇಲ್ಲ ಎಂದು ಚೆಕ್ ವಾಪಸ್ಸಾಗಿರುತ್ತದೆ. ಆರೋಪಿ ನನಗೆ ಚೆಕ್ ನ್ನು ನೀಡಿ 3 ತಿಂಗಳ ಒಳಗಾಗಿ ಬ್ಯಾಂಕಿಗೆ ಹಾಜರುಪಡಿಸುವಂತೆ ತಿಳಿಸಿದ್ದರು. ನಿರ್ಧಿಷ್ಟ ದಿನಾಂಕ ಹೇಳಿರಲಿಲ್ಲ.

5) ಚೆಕ್ ವಾಪಸ್ಸಾದ 1 ವಾರದಲ್ಲಿ ನಾನು ಆರೋಪಿಯನ್ನು ಭೇಟಿ ಮಾಡಿರುತ್ತೇನೆ. ನಾನು ವಕೀಲರ ಮೂಲಕ ಆರೋಪಿಗೆ ತಿಳುವಳಿಕೆ ಪತ್ರವನ್ನು ನೀಡಿರುತ್ತೇನೆ. ಆರೋಪಿಗೆ ಸದರಿ ನೋಟೀಸ್ ಜಾರಿಯಾಗಿರುವ ಬಗ್ಗೆ ತಿಳಿದುಕೊಂಡಿದ್ದೇನೆ. ಯಾವ ದಿನಾಂಕ ಎಂದು ಗೊತ್ತಿಲ್ಲ. ನಿಪಿ-1 ರ ಮೇಲೆ ಇರುವ ಆರೋಪಿಯ ಸಹಿ ಮಾತ್ರ ನನಗೆ ಗೊತ್ತು. ನಿಪಿ-5 ಮೇಲಿರುವ ಸಹಿ ಯಾರದ್ದು ಎಂದು ಗೊತ್ತಿಲ್ಲ. ವಕೀಲರ ಮೂಲಕ ನೋಟೀಸ್ ನೀಡಿದ ನಾಂತರ ನಾನು ಆರೋಪಿಯನ್ನು ಭೇಟಿ ಮಾಡಿಲ್ಲ. ಆರೋಪಿ ಪ್ರತ್ಯುತ್ತರ ನೀಡಿಲ್ಲ ಎಂದರೆ ಸರಿ.

6) ಆರೋಪಿಯೊಂದಿಗೆ ನಾನು ಬೇರೆ ವ್ಯವಹಾರ ಮಾಡಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಕಾಗದ ಪತ್ರಗಳನ್ನು ಸಹ ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಚೆಕ್

ನ ಮೇಲೆ ರೂ. 1,50,000/- ಹಣವನ್ನು ಬರೆದಿರುತ್ತಾರೆ. ಆರೋಪಿ ನನ್ನಿಂದ ಯಾವುದೇ ಹಣ ಪಡೆದಿಲ್ಲ ಎಂದರೆ ಸರಿಯಲ್ಲ.

**ಆರೋಪಿ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಕುಸುಮ ವಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಚನ್ನರಾಯಪಟ್ಟಣ.**